ಶ್ರೀ ಸುನೀಲ್ ವಿ.ಹೆಗಡೆ[ಶ್ರೀ ಕೆ.ಪಿ. ಬಚ್ಚೇಗೌಡ ಅವರ ಪರವಾಗಿ]: ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬೋರ್ ವೆಲ್‌ಗಳಲ್ಲಿ ನೀರು ನೂರಾರು ಫೂಟ್ ಕೆಳಗೆ ಹೋಗಿದ್ದು, ಒಂದು ಬೋರ್ ನಿಂದ 800 ರಿಂದ 1500 ಗ್ಯಾಲನ್ ಮಾತ್ರ ನೀರು ಸಿಗುತ್ತಿದೆ. ಹೀಗಿರುವಾಗ ಹನಿ ನೀರಾವರಿಯಿಂದ ಬೆಳೆಯುವ ಬೆಳೆಗಳಿಗೆ ವಿದ್ಯುತ್ ಕೊಡಬೇಕಾದರೆ, ಅವರ ಸ್ಲ್ಯಾಬ್ ಮಾಡಬೇಕಾಗುತ್ತದೆ. ಕೆಲವೊಂದು ಏರಿಯಾಗೆ 1-2 ಗಂಟೆ ಬಿಟ್ಟು ಮತ್ತೆ ಕೆಲವೊಂದು ಏರಿಯಾಗೆ 2 ಗಂಟೆ ಬಿಡಬೇಕಾಗುತ್ತದೆ. ಇಂಥ ಒಂದು ಸಂದರ್ಭದಲ್ಲಿ ಅಲ್ಲಿ ಅತಿ ಹಿಂದುಳಿದ ಕ್ಷೇತ್ರವೆಂದು ಸಚಿವರೆ ಹೇಳುತ್ತಿದ್ದಾರೆ. ಆ ಕಾರಣದಿಂದ ಅಲ್ಲಿ 6 ಗಂಟೆ ವಿದ್ಯುತ್ ಪೂರೈಕೆ ಮಾಡಿದರೆ ಸಾಧ್ಯವಾಗುವುದಿಲ್ಲ. ಕಾರ್ಖಾನೆಗಳಿಗೆ ವಿದ್ಯುತ್ ಅನ್ನು ಕಡಿತಗೊಳಿಸಿ ರೈತರಿಗೆ ಈ ಮೇ 15ರವೆಗೆ 12 ಗಂಟೆಗಳು ವಿದ್ಯುತ್ ಕೊಡುವ ವ್ಯವಸ್ಥೆಯಾಗಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್[ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು]: ಈಗಾಗಲೇ ಪರಿಸ್ಥಿತಿಯನ್ನು ವಿವರಿಸಲಾಗಿದೆ. ಸುಧಾರಿಸುವುದಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು.

ಈ) ವಿಷಯ: ಮಾಗಡಿ ತಾಲ್ಲೂಕಿನಲ್ಲಿ ಹಾದು ಹೋಗುವ ರಾಜ್ಯಹೆದ್ದಾರಿ 3ರಲ್ಲಿ ಹಾಗೂ 94ರಲ್ಲಿ ರಸ್ತೆಗಳು ಹಾಳಾಗಿದ್ದು ಈ ರಸ್ತೆಗಳ ದುರಸ್ತಿ ಕಾರ್ಯ ಕೈಗೊಳ್ಳುವ ಬಗ್ಗೆ.

\- - -

ಶ್ರೀ ಹೆಚ್.ಸಿ.ಬಾಲಕೃಷ್ಣ(ಮಾಗಡಿ):- ಸನ್ಮಾನ್ಯ ಅಧ್ಯಕ್ಷರೇ, ಮಾಗಡಿ ತಾಲ್ಲೂಕಿನಲ್ಲಿ ಹಾದು ಹೋಗುವ ರಾಜ್ಯ ಹೆದ್ದಾರಿ 3 ರಲ್ಲಿ ಮಾಗಡಿಯಿಂದ ಗುಡೇಮಾರನಹಳ್ಳಿ ಕೈಮಾರ್ಗದವರೆಗೆ ಹಾಗೂ ರಾಜ್ಯ ಹೆದ್ದಾರಿ -94 ರಲ್ಲಿ ಕಲ್ಯಾ-ಶ್ರೀಪತಿಹಳ್ಳಿ ಸಾತನೂರುವರೆಗೆ ವಾಹನಗಳು ಚಲಿಸಲು ಸಾಧ್ಯವಿಲ್ಲದಷ್ಟು ರಸ್ತೆಗಳು ಹದಗೆಟ್ಟಿದ್ದು ಹಾಗೂ ಇದಕ್ಕೆ ಸಂಬಂಧಪಟ್ಟ ಸಚಿವರು ಖುದ್ದಾಗಿ ಈ ರಸ್ತೆಗಲ ದುಸ್ಥಿತಿಯನ್ನು ಅವಗಾನಿಸಿ ದುರಸ್ಥಿಪಡಿಸುವ ಭರವಸೆ ನೀಡಿದ್ದರೂ ಸಹ, ಈ ರಸ್ತೆಗಳ ದುರಸ್ತಿಗೆ ಯಾವುದೇ ಕ್ರಮಗಳನ್ನು ಜರುಗಿಸಿರುವುದಿಲ್ಲದಿರುವ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ ಸಚಿವರು):- 1. ಹುಣಸನಹಳ್ಳಿ-ಚಿಕ್ಕಹಳ್ಳಿ ರಸ್ತೆ (ತಮಿಳುನಾಡು ಗಡಿಯಿಂದ ಆಂಧ್ರಗಡಿ ಸೇರುವ ರಸ್ತೆ) ರಾಜ್ಯಹೆದ್ದಾರಿ 3: ಸದರಿ ರಸ್ತೆಯು ಮಾಗಡಿ ತಾಲ್ಲೂಕಿನಲ್ಲಿ ಸರಪಳಿ 82.67 ರಿಂದ 120.50 ರವರೆಗೆ ಹಾದು ಹೋಗುತ್ತಿದ್ದು ಒಟ್ಟು 37.83 ಕಿಮೀ ಉದ್ದವಿರುತ್ತದೆ. ಸದರಿ ರಸ್ತೆಯ ಮಾಗಡಿಯಿಂದ ಗುಡೇಮಾರನಹಳ್ಳಿ ಭಾಗವು (ಸರಪಳಿ 93.50 ರಿಂದ 107.50) 14 ಕಿಮೀ ಉದ್ದವಿದ್ದು ಸದರಿ ಭಾಗದಲ್ಲಿ ಅಧಿಕ ವಾಹನ ಸಂಚಾರದಿಂದ **(PCU**

12576) ರಸ್ತೆಯು ಹಾಳಾಗಿದ್ದು ದುರಸ್ತಿಪಡಿಸಲು ಕೆಳಗಿನಂತೆ ಕ್ರಮ ತೆಗೆದುಕೊಳ್ಳಲಾಗಿದೆ.

ಸದರಿ ರಸ್ತೆಯ ಪೂರ್ತಿ ಉದ್ದವನ್ನು 2005–08ರ 3 ವರ್ಷಗಳ ರಾಜ್ಯ ಹೆದ್ದಾರಿ ನಿರ್ವಹಣೆ ಪ್ಯಾಕೇಜ್ ಅಡಿಯಲ್ಲಿ ನಿರ್ವಹಣೆಗಾಗಿ ಕೆ.ಆರ್.ಡಿ.ಸಿ.ಎಲ್ ಅನುದಾನದಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದ್ದು ರೂ.102.00 ಲಕ್ಷಗಳ ಮೊತ್ತದಡಿ ಕೇವಲ ನಿರ್ವಹಣೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ನಿರ್ವಹಣೆ ಪ್ಯಾಕೇಜ್ ಅವಧಿಯು 2008 ನವೆಂಬರ್ ಅಂತ್ಯಕ್ಕೆ ಮುಕ್ತಾಯವಾಗಿರುತ್ತದೆ. ಸದರಿ ಪ್ಯಾಕೇಜ್‌ನಲ್ಲಿ ಯಾವುದೇ ಮರು ನಿರ್ಮಾಣ, ಮರು ಡಾಂಬರೀಕರಣ ಕಾಮಗಾರಿಗೆ ಅಂದಾಜಿನಲ್ಲಿ ಅನುವು ಮಾಡಿರುವುದಿಲ್ಲ. ಸರಪಳಿ 95.5 ರಿಂದ 109.50 ಕಿಮೀ. ವರೆಗಿನ 14 ಕಿಮೀ. ರಸ್ತೆ ಉದ್ದದಲ್ಲಿ ಕೇವಲ 8 ಕಿಮೀ. ರಸ್ತೆ ಮಾತ್ರ ಗುಂಡಿ ಮುಚ್ಚಲು ಯೋಗ್ಯವಾಗಿದ್ದು 2008–09ನೇ ಸಾಲಿನಲ್ಲಿ ಸದರಿ 8 ಕಿಮೀ. ಉದ್ದದ ರಸ್ತೆಯನ್ನು ಗುಂಡಿಗಳನ್ನು ಮುಚ್ಚಲು ಲೆಕ್ಕ ಶೀರ್ಷಿಕೆ 3054 ರಾಜ್ಯ ಹೆದ್ದಾರಿ ನಿರ್ವಹಣೆ ಅಡಿಯಲ್ಲಿ ರೂ.700 ಲಕ್ಷಗಳ ಮೊತ್ತದಲ್ಲಿ ತೆಗೆದುಕೊಳ್ಳಲಾಗಿದ್ದು ಕಾಮಗಾರಿಗಳನ್ನು ಫೆಬ್ರವರಿ 2009 ರೊಳಗೆ ಪೂರ್ಣಗೊಳಿಸಲಾಗುವುದು. ಉಳಿದ 6 ಕಿಮೀ. ಉದ್ದದ ರಸ್ತೆಗೆ ಕಳೆದ 10 ವರ್ಷಗಳಿಂದಲೂ ಯಾವುದೇ ಮರುಡಾಂಬರೀಕರಣ ಮಾಡದೇ ಇರುವುದರಿಂದ ರಸ್ತೆಯ ಈ ಭಾಗವನ್ನು ಮರುನಿರ್ಮಾಣ ಮಾಡುವುದುದು ಅವಶ್ಯಕವಾಗಿದ್ದ, ಅನುದಾನದ ಲಭ್ಯತೆಗನುಗುಣವಾಗಿ ಕಾಮಗಾರಿ ಕೈಗೊಳ್ಳಲಾಗುವುದು.

ಸದರಿ ರಸ್ತೆಯ ಪೂರ್ತಿ ಉದ್ದವನ್ನು 2 ಪಥದ ರಸ್ತೆಯನ್ನಾಗಿ ಉನ್ನತ ಮಟ್ಟಕ್ಕೆ ಮರು ನಿರ್ಮಾಣ ಮಾಡಲು ಖಾಸಗಿ ಸಾರ್ವಜನಿಕ ಸಹಭಾಗಿತ್ವ (PPP) ಅಡಿ ಯೋಜನೆ ರೂಪಿಸಲಾಗಿದೆ.

II. ಬಾಗೇಪಲ್ಲಿ–ಹಲಗೂರು ರಾಜ್ಯ ಹೆದ್ದಾರಿ – 94

ಬಾಗೇಪಲ್ಲಿ–ಹಲಗೂರು ರಾಜ್ಯ ಹೆದ್ದಾರಿ – 94 ಮಾಗಡಿ ತಾಲ್ಲೂಕಿನಲ್ಲಿ ಸರಪಳಿ 141.32 ರಿಂದ 187.76 ಕಿಮೀವರೆಗೆ ಹಾದು ಹೋಗುತ್ತಿದ್ದು ಒಟ್ಟು 44.70 ಕಿಮೀ ಉದ್ದವಿರುತ್ತದೆ. (1.74 ಕಿಮೀ SH-85 ರ overlap ಆಗಿರುತ್ತದೆ) ಸದರಿ ರಸ್ತೆಯ ಕಲ್ಯಾ – ಶ್ರೀಪತಿಹಳ್ಳಿ, ಸಾತನೂರು ಭಾಗವು 165.62 ರಿಂದ 173.62 ರವರೆಗೆ ಒಟ್ಟು 8.00 ಕಿಮೀ ಉದ್ದವಿರುತ್ತದೆ. ಈ ಭಾಗವು ಸಹ ಅಧಿಕ ವಾಹನ ಸಂಚಾರದಿಂದಾಗಿ (8500 PCU) ರಸ್ತೆ ಹಾಳಾಗಿದ್ದು ಕೆಳಗಿನಂತೆ ದುರಸ್ಥಿ ಪಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಸದರಿ ರಸ್ತೆಯ ಪೂರ್ತಿ ಉದ್ದವನ್ನು 2005–08 ರ 3 ವರ್ಷಗಳ ಅವಧಿಯ ರಾಜ್ಯ ಹೆದ್ದಾರಿ ನಿರ್ವಹಣೆ ಪ್ಯಾಕೇಜ್ ಅಡಿಯಲ್ಲಿ ಕೆಆರ್‌ಡಿಸಿಎಲ್ ಅನುದಾನದಲ್ಲಿ ನಿರ್ವಹಣೆ ಮಾಡಲು ಕೈಗೆತ್ತಿಕೊಂಡಿದ್ದು, 2005ನೇ ಸಾಲಿನಲ್ಲಿ ರೂ.

355.00 ಲಕ್ಷಗಳ ವೆಚ್ಚದಲ್ಲಿ ನಿರ್ವಹಣೆ ಕಾಮಗಾರಿ ಹಾಗೂ ಸರಪಳಿ 141.32 ರಿಂದ 152.08 ರವರೆಗೆ 10.7 ಕಿಮೀ ಉದ್ದಕ್ಕೆ ರಸ್ತೆ ಪುನರ್ ನಿರ್ಮಾಣ (2 ಪದರ ಜಲ್ಲಿ, BM, SDBC) ಕಾಮಗಾರಿ ಪೂರ್ಣಗೊಳಿಸಲಾಗಿದೆ. ಪ್ಯಾಕೇಜ್‌ನ 2 ಮತ್ತು 3ನೇ ವರ್ಷಗಳಲ್ಲಿ ರಸ್ತೆ ನಿರ್ವಹಣೆ ಕಾಮಗಾರಿಗಳನ್ನು ಮಾತ್ರ ಕೈಗೊಂಡಿದ್ದು, 2008 ನವೆಂಬರ್ ಅಂತ್ಯಕ್ಕೆ ಪ್ಯಾಕೇಜ್ ಅವಧಿ ಮುಕ್ತಾಯಗೊಂಡಿರುತ್ತದೆ.

2008–09ನೇ ಸಾಲಿನಲ್ಲಿ ಸದರಿ ರಸ್ತೆಯ ಮೇಲೆ ಗುಂಡಿಗಳನ್ನು ಮುಚ್ಚಲು ಲೆಕ್ಕ ಶೀರ್ಷಿಕೆ 3054 ರಾಜ್ಯ ಹೆದ್ದಾರಿ ನಿರ್ವಹಣೆ ಅಡಿಯಲ್ಲಿ ರೂ.4.00 ಲಕ್ಷಗಳನ್ನು ಮೀಸಲಿರಿಸಿದ್ದು ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ.

ಸದರಿ ರಸ್ತೆಯು ಮಿಶ್ರ ಪಥವನ್ನು ಹೊಂದಿದ್ದು ವಿವರ ಈ ಕೆಳಕಂಡಂತಿದೆ.

ಸರಪಳಿ ಇಂದ ವರೆಗೆ		ಒಟ್ಟು ಉದ್ದ ಕಿಮೀ	ಅಗಲ ಮೀಟರ್‌ಗಳಲ್ಲಿ
141.32	152.08	10.76	5.50
152.08	165.62	13.54	7.00
165.62	173.62	8.00	3.75
173.62	175.36	1.74	7.00 (Overlap length)
175.36	187.76	12.40	5.50

ಈ ರಸ್ತೆಯನ್ನು ಅನುದಾನ ಲಭ್ಯತೆಗನುಗುಣವಾಗಿ ಮುಂದಿನ ವರ್ಷಗಳಲ್ಲಿ ಅಭಿವೃದ್ಧಿಪಡಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು.

ಶ್ರೀ ಸಿ.ಎಂ.ಉದಾಸಿ: ಆದರೆ, ಸದರಿ ರಸ್ತೆಯ ಪೂರ್ತಿ ಉದ್ದವನ್ನು ಎರಡು ಪಥದ ರಸ್ತೆಯನ್ನಾಗಿ ಮಾಡಬೇಕೆಂದು ಉನ್ನತಮಟ್ಟದಲ್ಲಿ ಮಾಡಬೇಕೆನ್ನುವ ಗುರಿ ಇದೆ. ಅದಕ್ಕೆ 10,000 ಕಿ.ಮೀ. ರಾಜ್ಯ. ಜಿಲ್ಲಾ ಹೆದ್ದಾರಿಗಳನ್ನು ಮಾಡುವಂಥ ಯೋಜನೆಯಲ್ಲಿ ಈ ಯೋಜನೆಯನ್ನು ಸೇರಿಸಿಕೊಂಡಿದ್ದನ್ನು ಈಗಾಗಲೇ ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ತಮ್ಮ ಗಮನಕ್ಕೆ ತಂದಿರುವ ವ್ಯವಸ್ಥೆಯಲ್ಲಿ, ನಾಳೆ 28ನೇ ತಾರೀಖಿನಂದು ಒಂದು ಸಭೆ ಇದೆ, ಆ ಸಭೆಯ ನಂತರ ಇನ್ನು 3–4 ತಿಂಗಳಿನಲ್ಲಿ ಇದಕ್ಕೆ ಒಂದು ವ್ಯವಸ್ಥೆಯನ್ನು ಮಾಡುತ್ತೇವೆನ್ನುವ ಭರವಸೆಯನ್ನು ನೀಡುವುದಕ್ಕೆ ಬಯಸುತ್ತಿದ್ದೇನೆ. ತಮ್ಮ ವ್ಯಾಪ್ತಿಯಲ್ಲಿ ಬರುವ ರಸ್ತೆಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಚೆಪಡುತ್ತಿದ್ದೇನೆ. ತಮಿಳುನಾಡು–ಕೋಡಿಹಳ್ಳಿ, ಕನಕಪುರ, ರಾಮನಗರ, ಮಾಗಡಿ, ಸೋಲೂರು, ದಾಬಸ್‌ಪೇಟ್ ಮಾಗಡಿ SH-3, ಈಗ 37.83 ಕಿ.ಮೀ.ಗಳನ್ನು ಹಾಗೂ ತಮ್ಮ ಮಾಗಡಿ ವ್ಯಾಪ್ತಿಯಲ್ಲಿ ಬರುವಂಥ ಬೆಂಗಳೂರು, ಮಾಗಡಿ ತಾ: ಬಾರ್ಡರ್, ವಯಾ ತಾವರೆಕೆರೆಯವರೆಗೆ 24.8 ಕಿ.ಮೀ., ಮಾಗಡಿ ತಾ: ಬಾರ್ಡರ್ ಕುಣಿಗಲ್ ಬಾರ್ಡರ್ ತಾ: ವಯಾ ಮಾಗಡಿಯವರೆಗೆ 31.69 ಕಿ.ಮೀ. ಹಾಗೂ ಮಾಗಡಿಯಲ್ಲಿ SH-85 near

Gonukuppe to Ramanagar Taluk 11.89 k.m., ಮಾಗಡಿಯಲ್ಲಿ MDR from Magadi to joining NH-48 near Solur 13.8 k.m. ಈ ರಸ್ತೆಗಳನ್ನು PPP ಮಾದರಿಯಲ್ಲಿ ತೆಗೆದುಕೊಳ್ಳುತ್ತಿರುವುದರಿಂದ ಬಹುತೇಕ ಜನರು ಆಸಕ್ತಿಯನ್ನು ಹೊಂದಿದ್ದಾರೆ, ಅತಿ ಶೀಘ್ರದಲ್ಲಿ ಇದನ್ನು ದುರಸ್ತಿ ಮಾಡಿಸುವಂಥ ಕೆಲಸವನ್ನು ಮಾಡುಸುತ್ತೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ರಾಜ್ಯ ಹೆದ್ದಾರಿ 94ರಲ್ಲಿ ಕಲ್ಯಾ–ಶ್ರೀಪತಿಹಳ್ಳಿ–ಸಾತನೂರುವರೆಗೆ ರಸ್ತೆ ಹಾಳಾಗಿದ್ದು, ಈ ರಸ್ತೆಗಳ ದುರಸ್ತಿ ಕಾರ್ಯ ಎಂದು ಉತ್ತರದಲ್ಲಿ ತಪ್ಪಾಗಿ ಮುದ್ರಣ ಮಾಡಿದ್ದಾರೆ, ರಸ್ತೆಗಳ ದುರಸ್ತಿ ಕಾರ್ಯವಲ್ಲ, ಹೊಸದಾಗಿ ಆ ರಸ್ತೆ ಅಭಿವೃದ್ಧಿಪಡಿಸುವುದಾಗಿರುತ್ತದೆ. ಮಾನ್ಯ ಸಚಿವರು ಅದರ ಕೆಳಗಡೆ ಇನ್ನೊಂದಿದೆ ಅದನ್ನು ಓದಲಿಲ್ಲ. ಕಳೆದ ಅಧಿವೇಶನದಲ್ಲೂ ಕೂಡ ಇದನ್ನು ಪ್ರಸ್ತಾಪ ಮಾಡಿದ್ದೇನೆ. ವಾಹನಗಳ ಸಂಚಾರಕ್ಕೆ ರಸ್ತೆ ಯೋಗ್ಯವಾಗಿಲ್ಲವೆಂದು ಅವರೇ ಇಲ್ಲಿ ಹೇಳುತ್ತಾರೆ PPP ನಲ್ಲಿ ಮಾಡುವುದರಲ್ಲಿ ನಮ್ಮದೇನು ತಕರಾರು ಇಲ್ಲ, ಅದನ್ನು ಎಷ್ಟು ದಿವಸದಲ್ಲಿ ಅಂದರೆ ಸದ್ಯದಲ್ಲಿ 2–3 ತಿಂಗಳಿನಲ್ಲಿ ಕೆಲಸ ಪ್ರಾರಂಭ ಮಾಡುತ್ತರೆಯೆ ಎಂಬುದನ್ನು ತಿಳಿಸಬೇಕು. ಮುಂದಿನ ಪ್ಯಾರವನ್ನು ತಾವು ಓದಲಿಲ್ಲ. ಶ್ರೀಪತಿಹಳ್ಳಿ ರಸ್ತೆಯನ್ನು ಕೂಡ KRDCLನಲ್ಲಿ ತೆಗೆದುಕೊಂಡಿದ್ದೆವೆಂದು ಹೇಳಿದಿರಿ ಅಲ್ಲೇನು ಕೆಲಸವಾಗಿಲ್ಲ, ರಸ್ತೆ ಬಹಳಷ್ಟು ಹದಗೆಟ್ಟಿದೆ, ಅದಕ್ಕೆ ಯಾವ ಅನುದಾನವನ್ನು ಬಿಡುಗಡೆ ಮಾಡಿ ಕೆಲಸ ಪ್ರಾರಂಭ ಮಾಡುತ್ತೀರಿ?

ಶ್ರೀ ಸಿ.ಎಂ.ಉದಾಸಿ: ತಾವು ಬಾಗೇಪಲ್ಲಿ–ಹಲಗೂರು ರಸ್ತೆಯನ್ನು ಕೇಳುತ್ತಿದ್ದೀರಿ, ಇಲ್ಲಿ ಅಧಿಕ ವಾಹನಗಳ ಸಂಚಾರವಿರುವುದರಿಂದ, ಎಂಟುವರೆ ಸಾವಿರ PC ಪ್ಯಾಕೇಜ್ ಇರುವುದರಿಂದ ಅದನ್ನು ಎರಡನೆ ಹಂತದಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ, ಇದನ್ನು ಮಾಡಿಸಿಕೊಡುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಎರಡನೆ ಹಂತದಲ್ಲಿ ತೆಗೆದುಕೊಳ್ಳಲಾಗುವುದೆಂದು ಹೇಳಿದಿರಿ, ಸದ್ಯಕ್ಕೆ ಅಲ್ಲಿ ಓಡಾಡುವುದಕ್ಕೇ ಆಗುತ್ತಿಲ್ಲ, ಗುಡೇಮಾರನಹಳ್ಳಿ ರಸ್ತೆಯನ್ನು ಗುಂಡಿ ಮುಚ್ಚುವುದಕ್ಕೆ ಯೋಗ್ಯವಿಲ್ಲವೆಂದು ಹೇಳಿದಿರಿ, ಈಗ ರಸ್ತೆಯಲ್ಲಿ ಗುಂಡಿ ಇಲ್ಲ, ಗುಂಡಿಯಲ್ಲಿ ರಸ್ತೆ ಇದೆ, ಅದು ನಮಗೆ ಸಮಸ್ಯೆಯಾಗಿರುವುದು, ಇದನ್ನು ಯಾವ ಅನುದಾನದಲ್ಲಿ ಮಾಡಿಕೊಡುತ್ತಿರಿ?

ಶ್ರೀ ಸಿ.ಎಂ.ಉದಾಸಿ: ಅದಕ್ಕೆ ಈಗ ನಾಲ್ಕು ಲಕ್ಷ ರೂಪಾಯಿಗಳನ್ನು ಮೀಸಲಿರಿಸಲಾಗಿದೆ, ಕಾಮಗಾರಿ ಪ್ರಾರಂಭ ಮಾಡಲಾಗುವುದು.

ಶ್ರೀ ಹೆಚ್.ಸಿ.ಬಾಲಕೃಷ್ಣ: ರಸ್ತೆ ಪೂರ್ತಿ ಗುಂಡಿಗಳಿರುವುದರಿಂದ ಗುಂಡಿ ಮುಚ್ಚುವುದಕ್ಕಾಗುವುದಿಲ್ಲ.

ಶ್ರೀ.ಸಿ.ಎಂ.ಉದಾಸಿ: ನಾನು ಇಲಾಖಾ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ಅತಿ ಶೀಘ್ರದಲ್ಲೇ ಮಾಡಿಸಿಕೊಡುತ್ತೇನೆ.